**ಓ.ಎಸ್. ನಂ. 611/2014 ಪಿ.ಡಬ್ಲ್ಯೂ-1 ಹೆಸರು - ಹೆಚ್ ಎಸ್ ಸೋಮಶೇಖರ್**

**ಸಾಕ್ಷಿಯನ್ನು ದಿನಾಂಕಃ 18.04.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ. ಕೆ ಎಸ್ ಎಂ ವಕೀಲರಿಂದಃ-**

ಈಗಾಗಲೇ ಕಡತದಲ್ಲಿರುವ ದಿನಾಂಕ 09.05.2009 ರ ನೋಂದಣಿ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಇದನ್ನು ನಿಪಿ 23 ಎಂದು ಗುರುತಿಸಲಾಯಿತು.

**ಮು. ಪಾಟೀ ಸವಾಲುಃ ಶ್ರೀ. ಬಿ.ವೈ ವಕೀಲರಿಂದಃ-**

4. ದಾವಾ ಸ್ವತ್ತಿನ ದಕ್ಷಿಣಕ್ಕೆ ಸರೋಜಮ್ಮರವರಿಂದ ನಾನು 2015 ರಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಸ್ವತ್ತಿನ ವಿಸ್ತೀರ್ಣ ನೆನಪಿಲ್ಲ. ಸದರಿ ಸ್ವತ್ತಿನ ಸರ್ವೆ ನಂಬರ್ 70/2 ಇರಬಹುದು. ಸದರಿ ಸ್ವತ್ತಿನ ನಿಖರವಾದ ವಿಸ್ತೀರ್ಣ ಗೊತ್ತಿಲ್ಲ. 120 x 63 ಅಡಿ ಇರಬಹುದು. ಸದರಿ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ನಾನು ಸದರಿ ಪ್ರದೇಶಕ್ಕೆ ಅಪರಿಚಿತರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ನನ್ನ ಸ್ನೇಹಿತನ ಮನೆ ಇದೆ ಎಂದು ಹೇಳುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಸಂಪೂರ್ಣ ಜಾಗಕ್ಕೆ ಕಾಂಪೌಂಡನ್ನು ನಿರ್ಮಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಸದರಿ ಛಾಯಾ ಚಿತ್ರದಲ್ಲಿನ ಕಾಂಪೌಂಡ್ ಹಾಕಿರುವ ಸ್ವತ್ತು ಮೈಸೂರು ಊಟಿ ರಸ್ತೆಯ ಪೂರ್ವಕ್ಕೆ ಇದೆ ಎಂದು ಹಾಗೂ ಸದರಿ ಸ್ವತ್ತು ನನಗೆ ಸೇರಿದ್ದು ಎಂದು ಹೇಳುತ್ತಾರೆ. ಸಾಕ್ಷಿಗೆ ತೋರಿಸಲಾದ ಛಾಯಾ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸರೋಜಮ್ಮರವರಿಂದ ಖರೀದಿಸಿದ ಸ್ವತ್ತಿನ ಉತ್ತರಕ್ಕೆ ನಿಡಿ-1 ರ ಸ್ವತ್ತು ಇದೆ. ನಿಡಿ-1 ರ ಕಾಂಪೌಂಡಿನಲ್ಲಿರುವ ಸ್ವತ್ತು ಪ್ರತಿವಾದಿ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂಬರ್ 70/2 ರ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಸರ್ವೆ ನಂಬರ್ 70/2 ರ ಪೂರ್ವ ಮಾಲೀಕರು ಯಾವ ವರ್ಷದಲ್ಲಿ ಯಾರಿಗೆಲ್ಲಾ ಎಷ್ಟು ವಿಸ್ತೀರ್ಣದ ಸ್ವತ್ತನ್ನು ಮಾರಾಟ ಮಾಡಿದ್ದಾರೆಂದು ಗೊತ್ತಿಲ್ಲ. ನಿಡಿ-1 ರ ಸ್ವತ್ತು ನನಗೆ ಸೇರಿದ್ದಲ್ಲ ಹಾಗೂ ಸದರಿ ಸ್ವತ್ತಿನ ಕುರಿತು ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸದರಿ ಸ್ವತ್ತನ್ನು ಖರೀದಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಸದರಿ ಸ್ವತ್ತನ್ನು ಸುಧಾ ಮತ್ತು ಜಗದೀಶ್ ರವರಿಂದ ಖರೀದಿಸಿರುತ್ತೇನೆ. ನಾನು 23 x 85 ಅಡಿ ಸ್ವತ್ತನ್ನು ಖರೀದಿಸಿರುತ್ತೇನೆ. ಸದರಿ 23 x 85 ಅಡಿ ಸ್ವತ್ತಿನ ಕುರಿತು ಸುಧಾ ಮತ್ತು ಜಗದೀಶ್ ರವರಿಗೆ ಹಾಗೂ ಅವರ ಹಿಂದಿನ ಮಾಲೀಕರಿಗೆ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಸ್ವತ್ತಿನ ಕುರಿತು ನನಗೂ ಕೂಡ ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸಿ 3-4 ವರ್ಷಗಳಾಗಿದ್ದು, ಇನ್ನು ಖಾತೆ

ಮಾಡಿಸಿಕೊಂಡಿಲ್ಲ. ನಾನು ಖಾತೆ ಮಾಡಿಸಿಕೊಂಡಿಲ್ಲದ ಕಾರಣ ಕಂದಾಯವನ್ನು ಪಾವತಿಸಿಲ್ಲ. ನನ್ನ ಮಾರಾಟಗಾರರಿಗೆ ಯಾವುದೇ ಹಕ್ಕು ಇಲ್ಲದ ಕಾರಣ ನನ್ನ ಹೆಸರಿಗೆ ಖಾತೆಯಾಗಿಲ್ಲ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನ ಇಂದಿನ ಮೌಲ್ಯ ಸುಮಾರು 15 ಲಕ್ಷ ಇದೆ. 8-9 ವರ್ಷಗಳ ಹಿಂದೆ ಸದರಿ ಸ್ವತ್ತಿನ ಮೌಲ್ಯ ಎಷ್ಟು ಇತ್ತು ಎಂದು ಗೊತ್ತಿಲ್ಲ. ಈ ಹಿಂದೆ ನಡೆದ ದಾವೆಯಲ್ಲಿ ಈಗ ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2 ರ ಕ್ರಯ ಪತ್ರದಂತೆ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ಸುಧಾಮಣಿ ಮತ್ತು ಶಿವಕುಮಾರ್ ರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ಸುಧಾಮಣಿ ಮತ್ತು ಶಿವಕುಮಾರ್ ರವರಿಗೆ ಮಾರಾಟ ಮಾಡಲು ಚನ್ನನಂಜಪ್ಪ ಮತ್ತು ಇತರರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-23 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ಸುಧಾಮಣಿ ಮತ್ತು ಶಿವಕುಮಾರ್ ರವರಿಗೆ ಮಾರಾಟ ಮಾಡಲು ಮಹದೇವಪ್ಪರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-7 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ಪುಟ್ಟಸ್ವಾಮಪ್ಪರವರಿಗೆ ಮಾರಾಟ ಮಾಡಲು ಮರಪ್ಪರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-8 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ಪುಟ್ಟಸ್ವಾಮಪ್ಪರವರಿಗೆ ಮಾರಾಟ ಮಾಡಲು ವೀರಭದ್ರಪ್ಪರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-9 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ಮರಪ್ಪರವರಿಗೆ ಮಾರಾಟ ಮಾಡಲು ರಾಮಯ್ಯರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-10 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ರಾಮೇಗೌಡರವರಿಗೆ ಮಾರಾಟ ಮಾಡಲು ನಂಜಯ್ಯರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-11 ರ ಕ್ರಯ ಪತ್ರದಂತೆ ಕ್ರಯ ಪತ್ರದ ಸ್ವತ್ತನ್ನು ರಾಮೇಗೌಡರವರಿಗೆ ಮಾರಾಟ ಮಾಡಲು ವೀರಭದ್ರಯ್ಯರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-12 ಮತ್ತು 13 ರ ಕ್ರಯ ಪತ್ರಕ್ಕೂ ಹಾಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 74-75 ನೇ ಸಾಲಿನಲ್ಲಿ ಪುಟ್ಟಯ್ಯರವರ ಹೆಸರಿಗೆ ಅನ್ಯಕ್ರಾಂತ ಆಗಿತ್ತು ಎಂದರೆ ಸರಿಯಲ್ಲ. 1974-1975 ನೇ ಸಾಲಿನಲ್ಲಿಯೇ ಅನ್ಯಕ್ರಾಂತ ಆಗಿದ್ದ ಕಾರಣ ನಿಪಿ 16 ರ ದಾಖಲಾತಿಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 17 ಮತ್ತು 18 ರ ದಾಖಲಾತಿಗಳನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-19 ರ ದಾಖಲಾತಿ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

6. ವಾದಿ ದಾವಾ ಸ್ವತ್ತಿನ ಕುರಿತಾಗಿ ಸ್ವಾಧೀನತೆಯಲ್ಲಿವುದರಿಂದ ಅವರ ಕ್ರಯದಾರರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ವಾದಿ ಸ್ವಾಧೀನತೆಯಲ್ಲಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**